# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:SHQ/ORG-1/Rajy S-G-Ro-Ra T.C/133/2026-27 - 626 ದಿನಾಂಕ:08.07.2026

10/7/2026

ಜಿಲ್ಲಾ ಕಾರ್ಯದರ್ಶಿಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
**ದಕ್ಷಿಣ ಕನ್ನಡ** ಜಿಲ್ಲೆ

ಮಾನ್ಯರೆ,

ವಿಷಯ:- 2025-26ನೇ ಸಾಲಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಸ್ಕೌಟ್ಸ್-ಗೈಡ್ಸ್‌ಗಳನ್ನು ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಕ್ಕೆ ನಿಯೋಜಿಸುವ ಬಗ್ಗೆ

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ 2025-26ನೇ ಸಾಲಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಸ್ಕೌಟ್ಸ್, ಗೈಡ್ಸ್‌ಗಳಿಗೆ ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

| | |
|---|---|
| ಶಿಬಿರ | ಸ್ಕೌಟ್ಸ್, ಗೈಡ್ಸ್‌ಗಳಿಗೆ ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರ |
| ಸ್ಥಳ | ಜಿಲ್ಲಾ ಸ್ಕೌಟ್-ಗೈಡ್ ತರಬೇತಿ ಕೇಂದ್ರ, ಪಿಲಿಕುಳ, ಮೂಡಬಿದರೆ, ದಕ್ಷಿಣ ಕನ್ನಡ ಜಿಲ್ಲೆ |
| ದಿನಾಂಕ | 24.07.2026 ರಿಂದ 28.07.2026ರ ವರೆಗೆ (5 ದಿನಗಳು) |
| ವರದಿ ಮಾಡುವ ದಿನಾಂಕ | 24.07.2026 ರಂದು ಸಂಜೆ 04.00 ಗಂಟೆಗೆ (ತಡವಾಗಿ ಬಂದವರನ್ನು ಸೇರಿಸಲಾಗುವುದಿಲ್ಲ) |
| ಬಿಡುಗಡೆ ದಿನಾಂಕ | 28.07.2026 ರಂದು ಸಂಜೆ 05.00 ಗಂಟೆಗೆ |
| ಊಟ ಹಾಗೂ ವಸತಿ | ರಾಜ್ಯ ಸಂಸ್ಥೆಯಿಂದ ವ್ಯವಸ್ಥೆ ಮಾಡಲಾಗಿದೆ |
| ನೊಂದಣಿ & ಶಿಬಿರ ಶುಲ್ಕ | ಪ್ರತಿಯೊಬ್ಬರಿಗೆ ರೂ.600/- |
| ಯಾರು ಭಾಗವಹಿಸುವುದು | ರಾಜ್ಯಪುರಸ್ಕಾರ ಆನ್‌ಲೈನ್ ಅರ್ಜಿ ಸಲ್ಲಿಸಿರುವ ಸ್ಕೌಟ್ಸ್-ಗೈಡ್ಸ್‌ಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ. ಈ ಸ್ಕೌಟ್ಸ್-ಗೈಡ್ಸ್‌ಗಳು ರಾಜ್ಯ ಸಂಸ್ಥೆಯು ಸಂಘಟಿಸಲಾಗುವ ಆನ್‌ಲೈನ್ ಲಿಖಿತ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವುದು. ನೊಂದಾವಣಿ ಮಾಡಿರುವ ಸ್ಕೌಟ್ಸ್-ಗೈಡ್ಸ್‌ಗಳ ಪಟ್ಟಿಯನ್ನು ರಾಜ್ಯ ಸಂಸ್ಥೆಯಿಂದ ಕಳುಹಿಸಲಾಗುವುದು. |
| ಭಾಗವಹಿಸುವ ಜಿಲ್ಲೆಗಳು | **ದಕ್ಷಿಣ ಕನ್ನಡ ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮಾತ್ರ** |
| ಗಮನಿಸಿ | * ಸಮವಸ್ತ್ರ ಪೂರ್ಣವಾಗಿರಬೇಕು. ಪ್ರಾವೀಣ್ಯತಾ ಪದಕ ಧರಿಸಿರಬೇಕು. (ಗೈಡ್ಸ್‌ಗಳಿಗೆ ಸ್ಯಾಷ್ ಕಡ್ಡಾಯ) ಲಾಗ್ ಬುಕ್ ಸಂಪೂರ್ಣಗೊಂಡಿರಬೇಕು ಮತ್ತು ಪದಕ ಪರೀಕ್ಷಕರಿಂದ ಸಹಿ & ಪ್ರಮಾಣ ಪತ್ರ ಪಡೆದಿರಬೇಕು.<br>* ಪರೀಕ್ಷಾ ಶಿಬಿರದಲ್ಲಿ ಭಾಗವಹಿಸುವ ಸ್ಕೌಟ್ಸ್/ಗೈಡ್ಸ್‌ಗಳೊಂದಿಗೆ ಸ್ಕೌಟರ್/ಗೈಡರ್‌ಗಳು ಕಡ್ಡಾಯವಾಗಿ ಭಾಗವಹಿಸಬೇಕು.<br>* ಒಂದು ಘಟಕದಿಂದ 16ಕ್ಕಿಂತಲೂ ಹೆಚ್ಚು ಸ್ಕೌಟ್ಸ್/ಗೈಡ್ಸ್‌ಗಳನ್ನು ಪರೀಕ್ಷಾ ಶಿಬಿರಕ್ಕೆ ಅನುಮತಿಸಲಾಗುವುದಿಲ್ಲ. |

| | |
|---|---|
| ತರಬೇಕಾದ ವಸ್ತುಗಳು | ಸಮವಸ್ತ್ರ, ಬದಲಿ ಉಡುಪು, ಹಗುರ ಹಾಸಿಗೆ, ಹೊದಿಕೆ, ತಟ್ಟೆ ಲೋಟ, ಸಂಪೂರ್ಣಗೊಂಡ ಲಾಗ್ ಬುಕ್, ಹಗ್ಗ, ಸ್ಟೇವ್, ಕಲರ್ ಪೆನ್ಸಿಲ್ಸ್, ಸ್ಕೆಚ್‌ಪೆನ್ಸ್ ಹಾಗೂ ಪರೀಕ್ಷೆಗೆ ಅವಶ್ಯವಿರುವ ಇತರೆ ವಸ್ತುಗಳು. ಪ್ರಾವೀಣ್ಯತಾ ಪ್ರಮಾಣ ಪತ್ರಗಳು ಮತ್ತು ಪದಕ ಇತ್ಯಾದಿ ಸಾಮಗ್ರಿಗಳನ್ನು ಕಡ್ಡಾಯವಾಗಿ ತರಬೇಕು. |

ಸಹಾಯಕ ರಾಜ್ಯ ಸಂಘಟನಾ ಆಯುಕ್ತರು/ಜಿಲ್ಲಾ ಸಂಘಟಕರುಗಳು/ಸ್ಕೌಟ್-ಗೈಡ್ ಸ್ವಯಂ ಸೇವಕರು/ಸ್ಕೌಟ್-ಗೈಡ್ ಸಹಾಯಕರುಗಳು ಸ್ಕೌಟ್ಸ್-ಗೈಡ್ಸ್‌ಗಳನ್ನು ಪರೀಕ್ಷಾ ಶಿಬಿರಕ್ಕೆ ನಿಯೋಜಿಸುವ ಮುನ್ನ ಮೇಲ್ಕಂಡ ನಿಭಂದನೆಗಳನ್ನು ಪರಿಶೀಲಿಸಿ, ಅರ್ಹರಿರುವ ಸ್ಕೌಟ್ಸ್/ಗೈಡ್ಸ್‌ಗಳನ್ನು ಮಾತ್ರ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಕ್ಕೆ ನಿಯೋಜಿಸಲು ಕೋರಲಾಗಿದೆ. ತಮ್ಮ ಜಿಲ್ಲೆಯಿಂದ ಭಾಗವಹಿಸುವ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸುವ ಬಗ್ಗೆ ರಾಜ್ಯ ಸಂಸ್ಥೆಗೆ ದಿನಾಂಕ:20.07.2026ರ ರೊಳಗೆ ತಿಳಿಸುವುದು. ಕೂಡಲೆ ಕ್ರಮ ವಹಿಸಲು ತಿಳಿಸಲಾಗಿದೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

**ಪ್ರತಿಯನ್ನು ಮಾಹಿತಿಗಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ
2. ಜಿಲ್ಲಾ ಆಯುಕ್ತರು (ಸ್ಕೌ/ಗೈ), ಭಾ.ಸ್ಕೌ&ಗೈ
3. ರಾಜ್ಯದ ಎಲ್ಲಾ ಸಹಾಯಕ ರಾಜ್ಯ ಸಂಘಟನಾ/ಜಿಲ್ಲಾ ಸಂಘಟಕರು/ಸ್ಕೌಟ್-ಗೈಡ್ ಸ್ವಯಂ ಸೇವಕರು/ಸ್ಕೌಟ್-ಗೈಡ್ ಸಹಾಯಕರುಗಳಿಗೆ
4. ಶಿಬಿರದ ನಾಯಕರು/ಸಹನಾಯಕರು/ಪರೀಕ್ಷಕರುಗಳಿಗೆ
5. ಸಂಬಂಧಪಟ್ಟ ತರಬೇತಿ ಶಿಬಿರ ಕೇಂದ್ರಕ್ಕೆ
6. ಲೆಕ್ಕ ವಿಭಾಗ
7. ಕಛೇರಿ ಪ್ರತಿ